▸ ಎಂ.ಟಿ.ವಿ. ಆಚಾರ್ಯ ಅವರ ಕಲಾಕೃತಿ ಇರುವ ಜನವರಿ ಸಂಚಿಕೆಯ ಮುಖಪುಟ ಮುದ ನೀಡಿತು. ಸಾರಂಗಿ ವಾದಕ ಫಯಾಜ್ ಖಾನ್ ಅವರ ಸಂದರ್ಶನ 'ಸಾರಂಗಿಯ ಸಂಗೀತದ ಸಾಕ್ಷಾತ್ಕಾರ' ಗಮನ ಸೆಳೆಯಿತು. ರವಿರಾಜ ಬೈಕಂಪಾಡಿ ಅವರ ಪತ್ತೆದಾರಿ ಕತೆ 'ಎರಡನೆಯ ಕಲೆ' ಇಷ್ಟವಾಯಿತು.

**ಎಂ.ಕೆ. ಮಂಜುನಾಥ್, ಬೆಂಗಳೂರು**

▸ ಮುಖಪುಟ ಮುದ್ದಾಗಿದೆ. ಕತೆಗಳು ವೈವಿಧ್ಯತೆಯಿಂದ ಕೂಡಿವೆ. 'ನಂದಾದೀಪ'ದಲ್ಲಿನ ಅಗಲಿದ ಲೇಖಕರ ಕುರಿತ ಬರಹಗಳು ಮೌಲಿಕವಾಗಿವೆ.

**ಮೋಹನ ರು. ಹಣಗಿ, ಅಮೀನಗಡ**

▸ ರಂ.ಶಾ. ಲೋಕಾಪುರ ಮತ್ತು ಚೆನ್ನಣ್ಣ ವಾಲೀಕಾರ – ಕನ್ನಡದ ಈ ಇಬ್ಬರು ಲೇಖಕರ ನಿರ್ಗಮನ ಸಾಹಿತ್ಯ ಲೋಕಕ್ಕೆ ದೊಡ್ಡ ನಷ್ಟ. ಈ ಲೇಖಕರ ಕುರಿತ ಲೇಖನಗಳು ಅವರ ಬದುಕು–ಬರಹವನ್ನು ಅರ್ಥಪೂರ್ಣವಾಗಿ ಸ್ಮರಿಸಿವೆ.

**ಸುವರ್ಣ ಮಠ, ಧಾರವಾಡ**

▸ ಈ ಸಂಚಿಕೆಯ ಸೊಗಸು ಹೆಚ್ಚಿಸಿದ್ದು ಅಪರೂಪದ ಸಾರಂಗಿ ವಾದಕ ಫಯಾಜ್ ಖಾನ್ ಅವರ ಜೊತೆಗಿನ 'ಮಾತು–ಕತೆ'.

**ಕೆ.ಎಸ್. ರಾಜಶೇಖರ, ವಿಜಯಪುರ**

▸ ಸಂದರ್ಶನ ಸೊಗಸಾಗಿದೆ. ಇತ್ತೀಚಿನ ದಿನಗಳಲ್ಲಿ ಸಾರಂಗಿ ಕಲಿಯುವವರ ಸಂಖ್ಯೆ ಕ್ಷೀಣಿಸುತ್ತಿರುವುದು ಬೇಸರದ ಸಂಗತಿ.

**ಬಾ.ರಂ. ಸುರೇಶ್, ಶಿವಮೊಗ್ಗ**

▸ ಬಾನು ಮುಷ್ತಾಕ್ ಅವರ 'ಜನ್ನತ್–




ಎ–ಫಿರ್ದೋಸ್' ಕತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಸೆಂಟ್ ಹೊಡೆದು ಮೈಲಿಗೆ ದೂರ ಮಾಡುತ್ತೇನೆಂಬ ಮಗನ ವರ್ತನೆ, ಆಕೆಯ ನೋವು, ಮಗಳ ನೆನಪು – ಈ ಎಲ್ಲ ಸಂಗತಿಗಳನ್ನು ಲೇಖಕಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

**ಮಚ್ಚೇಂದ್ರ ಪಿ. ಅಣಕಲ್, ಕಲಬುರ್ಗಿ**

▸ 'ಜನ್ನತ್–ಎ–ಫಿರ್ದೋಸ್' ಕತೆ ಮಾನವೀಯವಾಗಿದೆ, ಮನನೀಯವಾಗಿದೆ.

**ಡಿ. ರಾಮನಮಲಿ, ಹರಪನಹಳ್ಳಿ**

▸ 'ಜನ್ನತ್–ಎ–ಫಿರ್ದೋಸ್' ಕತೆಯಲ್ಲಿ ಕಥಾನಾಯಕಿ ಜೀನತ್‌ಳ ಪಾಪ ಪ್ರಜ್ಞೆ, ಮಾನಸಿಕ ತೊಳಲಾಟವನ್ನು ದುರ್ವಾಸನೆಯ ಮೂಲಕ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಅಂತ್ಯವು ಕತೆಯ ತೀವ್ರತೆಯನ್ನು ಜಾಳಾಗಿಸಿದೆ.

**ಎಸ್. ಚಂದ್ರಕಾಂತ, ಬೆಂಗಳೂರು**

▸ ಈ ಸಂಚಿಕೆಯಲ್ಲಿನ ಕೆ.ವಿ. ರಾಜಲಕ್ಷ್ಮಿ ಅವರ 'ತ್ರಿಕರ ವ್ಯೂಹ', ನಾಗ ಎಚ್. ಹುಬ್ಳಿ ಅವರ 'ಕಳವು' ಮತ್ತು ರವಿರಾಜ ಬೈಕಂಪಾಡಿ ಅವರ 'ಎರಡನೆಯ ಕಲೆ' ಕತೆಗಳು ಓದಿನ ಖುಷಿಯನ್ನು ಹೆಚ್ಚಿಸಿದವು.

**ಸುಂದರ್, ಬೆಂಗಳೂರು**